ಶ್ರೀ ಜಿ ರಾಮದಾಸ್.—ಅಧ್ಯಕ್ಷರೇ ಅಲ್ಲಿ ಕುಡಿಯುವ ನೀರಿನ ಸರಬರಾಜಿಗೆ ತುಂಬಾ ತೊಂದರೆಯಾಗುತ್ತಿದೆ ಸರ್ಕಾರದವರು ಕರೆಕ್ಟಾದ ಟೈಮಿಂಗ್ ವಿದ್ಯುತ್ ಸರಬರಾಜು ಮಾಡುವಂತೆ ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ರೀತಿ ಒಂದು ಸಿಸ್ಟಮೇಟಿಕ್ಕಾಗಿ ವಿದ್ಯುತ್ ಸರಬರಾಜು ಮಾಡುವುದಕ್ಕೆಂದೇ ಹೊಸ ವ್ಯವಸ್ಥೆಗಾಗಿ ನಾವು ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ.

ಶ್ರೀ ಎಂ. ವೀರಿಕಾರ್ಜುನ ಖರ್ಗೆ.—ಶ್ರೀ ರಾಮದಾಸ್‌ರವರು ಎತ್ತಿರುವ ಪ್ರಶ್ನೆ ಎಲ್ಲರಿಗೂ ಅಪ್ಲೈ ಆಗುವಂಥಾದ್ದು. ತಾವು ಹೇಳಿದ ಹಾಗೆ ರೆವಿನ್ಯೂ ವಿಲೇಜಸ್‌ಗೆ ಮಾತ್ರ ಎಲೆಕ್ಟ್ರಿಫಿಕೇಷನ್ ಮಾಡುವ ಕ್ರಮ ತೆಗೆದುಕೊಂಡಿದ್ದೀರಿ. ನಮ್ಮ ಕಡೆ ಕೆಲವು ಹ್ಯಾಮ್ಲೆಟ್ಸ್ ವಿಲೇಜಸ್ ಏನಿವೆ ಅಲ್ಲಿ ವಿದ್ಯುತ್ ಕಡಿತ ಮಾಡಿದರೆ ತೊಂದರೆಯಾಗುತ್ತದೆ. ಒಂದೊಂದು ಹಳ್ಳಿಗಳಲ್ಲಿ ೪೦೦–೫೦೦ ಮನೆಗಳಿವೆ ಎರಡು ಸಾವಿರದವರೆಗೂ ಪಾಪುಲೇಷನ್ ಇದ್ದರೂ ಕೂಡ ಆವನ್ನು ರೆವಿನ್ಯೂ ವಿಲೇಜಸ್‌ಗೆ ಸೇರಿಸಿಲ್ಲ. ರೆವಿನ್ಯೂ ವಿಲೇಜಸ್ ೧೫೦೦ ಇದ್ದರೆ, ೮೦೦ ಹ್ಯಾಮ್ಲೆಟ್ಸ್ ಇವೆ. ತಾಂಡಗಳನ್ನು ಬಿಟ್ಟು ನಾನು ಹೇಳುತ್ತಿರುವುದು. ಅಂಥಾ ಮೇನ್ ವಿಲೇಜಸ್ ಬಗ್ಗೆ ಏನು ಕಾರ್ಯಕ್ರಮ ಇದೆ ಹೇಳಿ ?

ಶ್ರೀ ಲಕ್ಷ್ಮೀನರಸಿಂಹಯ್ಯ —ನಾವು ೧೯೭೧ ನೇ ಇಸವಿ ಸೆನ್ಸಸ್ ಪ್ರಕಾರ ನಿಗದಿಮಾಡಿದ ಎಲ್ಲಾ ರೆವೆನ್ಯೂ ವಿಲೇಜಸ್‌ಗೂ ವಿದ್ಯುತ್‌ನ್ನು ಕೊಟ್ಟಿದ್ದೇವೆ. ೧೯೮೧ ನೇ ಇಸವಿಯಾಲ್ಲಿ ಮತ್ತೆ ಸೆನ್ಸಸ್ ಮಾಡಿ ೬೮೦ ಹಳ್ಳಿಗಳನ್ನು ಸೇರಿಸಿದ್ದಾರೆ. ಸಾಮಾನ್ಯವಾಗಿ ತಾವು ಹೇಳಿದಂಥ ವಿಲೇಜಸೆಲ್ಲ ಮೇನ್ ವಿಲೇಜಸ್‌ನಲ್ಲಿ ಬರುತ್ತವೆ. ಅವುಗಳಿಗೆ ಈ ವರ್ಷದ ಕೊನೆಯಲ್ಲಿ ವಿದ್ಯುತ್‌ನ್ನು ಸಂಪೂರ್ಣ ನೀಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ. ಕಾರಣಾಂತರಗಳಿಂದ ಸೇರದೇ ಇರುವ ೨೧೦೦ ಕ್ಕಿಂತ ಜನಸಂಖ್ಯೆ ಜಾಸ್ತಿ ಇರುವ ಹಳ್ಳಿಗಳಿದ್ದರೆ ಹೇಳಿ ಅವಕ್ಕೆ ವಿದ್ಯುತ್‌ನ್ನು ಒದಗಿಸಿಕೊಡುತ್ತೇನೆ.

ಅರಣ್ಯ ಸಂಪನ್ಮೂಲಗಳಿಂದ ಆದಾಯ

೧೩೯೦. ಶ್ರೀ ಜಿ. ರಾಜುಗೌಡ, (ಹನೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶವು ವಿಸ್ತೀರ್ಣವೆಷ್ಟು ?

ಆ) ಈ ಪ್ರದೇಶಗಳನ್ನು ಎಷ್ಟು ವಿಭಾಗಗಳಾಗಿ ವಿಂಗಡಿಸಲಾಗಿದೆ ?

ಇ) ೧೯೮೬-೮೭ ಹಾಗೂ ೧೯೮೭-೮೮ನೇ ಸಾಲಿನಲ್ಲಿ ಅರಣ್ಯ ಪ್ರದೇಶದಿಂದ ವಿವಿಧ ಮೂಲಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು ?

ಈ) ಆಡಳಿತಕ್ಕೆ ಸಂಬಂಧಪಟ್ಟ ವೆಚ್ಚವೆಷ್ಟು ?

ಶ್ರೀ ಜಿ.ಎಸ್. ಬಾಗಲ್‌ಕೋಟೆ (ಅರಣ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ೩೮,೬೪೪ ಚದರ ಕಿಲೋಮೀಟರುಗಳು.

ಆ) ಆಡಳಿತಾತ್ಮಕ ದೃಷ್ಟಿಯಿಂದ ಈ ಅರಣ್ಯ ಪ್ರದೇಶಗಳನ್ನು ೩೩ ವಿಭಾಗಗಳಾಗಿ ವಿಂಗಡಿಸಲಾಗಿದೆ.

ಇ) ವಿವಿಧ ಮೂಲಗಳಿಂದ ಅರಣ್ಯ ಇಲಾಖೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯ ಈ ಕೆಳಕಂಡಂತಿರುತ್ತದೆ. ೧೯೮೬-೮೭ ರೂ. ೫೪,೨೮,೨೨,೬೪೬-೦೦ ೧೯೮೭-೮೮ ರೂ. ೫೧,೭೬,೭೦,೩೬೧-೮೧. (ಮಾರ್ಚ್ ಪ್ರಿಲಿಮಿನರಿ)

ಈ) ಆಡಳಿತಕ್ಕೆ ಸಂಬಂಧಪಟ್ಟ ವೆಚ್ಚ ೧೯೮೬-೮೭ ಮತ್ತು ೮೭-೮೮ನೇ ಸಾಲಿನಲ್ಲಿ ಈ ಕೆಳಕಂಡಂತಿರುತ್ತದೆ.

೧೯೮೬-೮೭ ರೂ. ೧೯,೩೫,೨೨,೮೬೩-೦೦

೧೯೮೭-೮೮ ರೂ. ೧೮,೦೯,೩೭,೦೦೦-೦೦

ಶ್ರೀ ಜಿ. ರಾಜುಗೌಡ.—ಕಿರ್ಕಳಿ,ಹೊಳೆ ಹೆಕ್ಟೇರ್ ಪ್ರದೇಶಕ್ಕೆ ತಾವು ಆದಾಯ ತೋರಿಸಿರುವುದು ಹೊಳೆ ಕೋಟಿ ಎಂದು, ಇದು ಸರಾಸರಿ ಎಕರೆಗೆ ೧೫೦ ರೂಪಾಯಿಗಳಂ ಮಾತ್ರ ಬರುತ್ತದೆ. ಈ ಪ್ರಮಾಣವನ್ನು ಜಾಸ್ತಿ ಮಾಡಲು ಏನು ಏನು ಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಜಿ.ಎಸ್. ಬಾಗಲಕೋಟಿ.—ಮಾನ್ಯ ಅಧ್ಯಕ್ಷರೇ, ಇವೊತ್ತು ಅರಣ್ಯ ಉತ್ಪನ್ನ ಹೆಚ್ಚು ಮಾಡುವುದಕ್ಕಿಂತ ಪರಿಸರ ಸಮತೋಲನವನ್ನು ಕಾಯ್ದುಕೊಂಡು ಹೋಗುವುದು ಅವಶ್ಯಕ. ಆ ದೃಷ್ಟಿಯಿಂದ ನಾವು ಈಗಾಗಲೇ ಅರಣ್ಯ ಇಲಾಖೆಯಿಂದ ವ್ಯವಸ್ಥಿತವಾಗಿ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಮುಖ್ಯವಾಗಿ ವೆಸ್ಟರ್ನ್ ಘಾಟ್‌ನಲ್ಲಿ ಬರುವ ಎವರ್‌ಗ್ರೀನ್ ಮತ್ತು ಸೆಮಿ ಎವರ್‌ಗ್ರೀನ್ ಫಾರೆಸ್ಟ್‌ನಲ್ಲಿ ಮರ ಕಡಿಯುವುದನ್ನು ನಾವು ನಿಷೇಧಿದ್ದೇವೆ. ಆದ್ದರಿಂದ ಅರಣ್ಯ ಇಲಾಖೆ ಉತ್ಪನ್ನದಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಆದರೆ ಅದು ಇನ್ನೂ ಪ್ರಿಲಿಮಿನರಿ ಫಿಗರ್ ಆಗಿದೆ ಫೈನಲ್ ಫಿಗರ್ ಬೇರೆ ಇದೆ. ಇನ್ನೂ ಎರಡು ಕೋಟಿ ಹೆಚ್ಚು ಹಣ ಅರಣ್ಯ ಉತ್ಪನ್ನದಿಂದ ಬರುವಂತಹ ಸಾಧ್ಯತೆಯಿದೆ. ಜೊತೆಗೆ ಅರಣ್ಯ ಪ್ರದೇಶವನ್ನು ಇನ್ನು ಹೆಚ್ಚು ಪ್ರದೇಶಗಳಲ್ಲಿ ಬೆಳೆಸ ಬೇಕೆಂದು ಇದ್ದೇವೆ. ಅಲ್ಲಲ್ಲಿ ನೆಡುತೋಪುಗಳನ್ನು ಬೆಳೆಸಿ ಅರಣ್ಯ ಉತ್ಪನ್ನವನ್ನು ಹೆಚ್ಚು ಮಾಡ ತಕ್ಕಂತಹ ಕಾರ್ಯಕ್ರಮವನ್ನು ಸಹ ಸರಕಾರ ಹಾಕಿಕೊಂಡಿದೆ.

ಶ್ರೀ ಜಿ. ರಾಜೂಗೌಡ.—ಕಿಸಿ ವಿಭಾಗಗಳನ್ನು ಮಾಡಿದೆ, ಎಂದು ತಾವು ತಿಳಿಸಿದ್ದೀರಿ ಅದು ಇರಲಿ. ಗಂಧದ ಮರದ ಕಳ್ಳಸಾಗಾಣಿಕೆ ಮಾರಾಟದಿಂದ ಮತ್ತು ಹಿಡಿದಿರತಕ್ಕಂತಹ ವಾಹನ ಗಳಲ್ಲಿ ಏನು ಗಂಧದ ಮರ ಇರುತ್ತದೆ ಅದರ ಮಾರಾಟದಿಂದ ಬರತಕ್ಕಂತಹ ಆದಾಯವನ್ನೂ ಇದರಲ್ಲಿ ಸೇರಿಸಿರುತ್ತೀರಾ ? ಈ ಮೂವತ್ತೊಂದು ವಿಭಾಗಗಳಲ್ಲಿ ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಹುದ್ದೆಯನ್ನು ಸೃಷ್ಟಿ ಮಾಡಿ ಅದರಿಂದ ಆದಾಯವನ್ನು ಹೆಚ್ಚು ಮಾಡಬೇಕೆಂಬ ಉದ್ದೇಶವೇನಾದರೂ ಸರಕಾರಕ್ಕಿದೆಯೇ ? ಯಾವ ಯಾವ ವಿಭಾಗದಲ್ಲಿ ಎಷ್ಟಷ್ಟು ಆದಾಯ ಬರುತ್ತದೆ ?

ಶ್ರೀ ಜಿ.ಎಸ್. ಬಾಗಲಕೋಟಿ.—ಯಾವ ಯಾವ ವಿಭಾಗಗಳಲ್ಲಿ ಎಷ್ಟೆಷ್ಟು ಆದಾಯ ಬರುತ್ತದೆ ಎನ್ನುವುದರ ಪಟ್ಟಿಯನ್ನು ಸನ್ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ, ಅರಣ್ಯ ಇಲಾಖೆಯ ವತಿಯಿಂದ ನಡೆಸುತ್ತಿರತಕ್ಕಂತಹ ಕಾರ್ಯಕ್ರಮದ ಬಗ್ಗೆ ಸರಿಯಾದ ನಿಗವನ್ನು ಇಡಬೇಕು ಮತ್ತು ಸರಿಯಾದ ಬೇಳೆ ಯಲ್ಲಿ ಕೆಲಸವಾಗಬೇಕು ಎಂಬ ಸದುದ್ದೇಶದಿಂದ ಬೇರೆ ಬೇರೆ ವಿಭಾಗಗಳನ್ನು ಮಾಡಿದ್ದೇವೆ. ಎ.ಸಿ.ಎಫ್. ಹುದ್ದೆಯನ್ನು ಕಿಸಿ ವಿಭಾಗಗಳಲ್ಲಿ ವಿಂಗಡಿಸಿರುವುದಕ್ಕೆ ಇದು ಮುಖ್ಯ ಕಾರಣ. ಅಲ್ಲಲ್ಲಿ ನೆಡು ತೋಪುಗಳು ಮತ್ತು ಇತರ ಅರಣ್ಯ ಪ್ರದೇಶಗಳಲ್ಲಿನ ಅನೇಕ ಕೆಲಸ ಕಾರ್ಯಗಳು ಚೆನ್ನಾಗಿ ನಡೆದು ಪ್ರತಿಯೊಂದು ವಿಭಾಗದಲ್ಲೂ ಕೂಡ ಉತ್ಪನ್ನ ಹೆಚ್ಚಾಗುವ ಸಾಧ್ಯತೆ ಇದೆ.

ಶ್ರೀ ಜಿ. ರಾಜೂಗೌಡ —ತಾವು ಏನು ೧೯೮೬-೮೭ ರಲ್ಲಿ ಆದಾಯವನ್ನು ಇದರಲ್ಲಿ ತೋರಿಸಿದ್ದೀರಿ. ಅದರಲ್ಲಿ ತಾವು ಮಾರಾಟ ಮಾಡತಕ್ಕಂತಹ ಗಂಧದ ಮರದ ಆದಾಯ ಮತ್ತು ಕಳ್ಳ ಸಾಗಾಣಿಕೆಯಲ್ಲಿ ಏನು ಪಾಲನ್ನು ಹಿಡಿಯಕ್ಕಿರಿ ಮತ್ತು ವಾಹನಗಳನ್ನು ಏನು ಹಿಡಿದಿದ್ದೀರಿ, ಅವುಗಳ ಮಾರಾಟದಿಂದ ಬರತಕ್ಕಂತಹ ಆದಾಯ ಎಲ್ಲವನ್ನೂ ಸೇರಿಸಿ ಕೊಟ್ಟಿದ್ದೀರಾ ?

ಶ್ರೀ ಜಿ.ಎಸ್. ಬಾಗಲಕೋಟ್.—ಅದರ ಸಂಪೂರ್ಣ ವಿವರ ನನ್ನ ಬಳಿ ಇಲ್ಲ ಅವರಿಗೆ ಈ ವಿವರ ವನ್ನು ನಂತರ ಕಳಿಸಿಕೊಡುತ್ತೇನೆ.

ಅಧ್ಯಕ್ಷರು —ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರ ಪ್ರಶ್ನೆಗೆ ಸಚಿವರು ಸಮಯ ಕೇಳಿದ್ದಾರೆ ಸಮಯವನ್ನು ಕೊಟ್ಟಿದ್ದೇನೆ.